THE NEW SUNDAY EXPRESS

SUNDAY 21.03.2021

# Colorectal cancer survivorship programme inaugurated

Udupi: The Surgical Oncology of Kasturba Medical College and Hospital, Manipal, under the Manipal Comprehensive Cancer Care Centre conducted a CME on 'Colorectal Cancers' on Saturday. To cater to the growing number of cancer survivors, Dr H S Ballal, Pro-Chancellor of MAHE, inaugurated the colorectal cancer survivorship programme on the occasion and said Kasturba Hospital is committed to providing the best of the services with no compromise on the quality. "Organising this kind of Continuing Medical Education Programme will help in updating the surgeon with latest advancement in the technology and techniques," he said.Guest of honour, Dr PLNG Rao said colorectal cancers have become common in South Asia, due to change in lifestyle and can be found in people across all age groups. Exploring and sharing knowledge through events like this will always be helpful in making better surgeons, he said.The CME discussed about the latest treatment practices in colorectal cancer care. It was brainstormed by 28 faculty members from six cancer centres, practising in various aspects of cancer care ranging from cancer surgery, chemotherapy, radiotherapy, radiology and palliative care. ENS



THE TIMES OF INDIA, MANGALURU
THURSDAY, MARCH 25, 2021

## Cancer survivorship programme

**Mangaluru:** The surgical oncology department of Kasturba Medical College and Hospital, Manipal, under the Manipal Comprehensive Cancer Care Centre, conducted a continuing medical education (CME) event on Colorectal Cancers on Saturday. Dr H S Ballal, pro-chancellor, MAHE said CME programmes of this nature will help a surgeon stay updated with the latest advancement in technology. The programme is an initiative, wherein cancer survivors not only come together, but also become involved in motivation, share experiences and support newly diagnosed cancer patients.

THE HINDU MANGALURU
MONDAY, MARCH 22, 2021

# Cancer survivorship programme launched

SPECIAL CORRESPONDENT
MANGALURU

Pro-Chancellor of Manipal Academy of Higher Education (MAHE) H.S. Ballal inaugurated the colorectal cancer survivorship programme to cater to the growing number of cancer survivors at Kasturba Medical College and Hospital in Manipal on Saturday.

The surgical oncology unit under the Manipal Comprehensive Cancer Care Centre at the hospital conducted the continued medical education (CME) programme on colorectal cancers on the occasion.

Pro Vice-Chancellor of MAHE P.L.N.G. Rao said that colorectal cancers have become common in South Asia, due to change in lifestyle and it can be found in people across all age group.

ಪ್ರಜಾವಾಣಿ
ಸೋಮವಾರ • ಮಾರ್ಚ್ 22, 2021




ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ವೈದ್ಯಕೀಯ ಕಾಲೇಜು, ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗ, ಮಣಿಪಾಲ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ ಸಹಭಾಗಿತ್ವದಲ್ಲಿ ದೊಡ್ಡ ಕರುಳಿನ ಕ್ಯಾನ್ಸರ್ ಕುರಿತು ವೈದ್ಯಕೀಯ ಶಿಕ್ಷಣ ಕಾರ್ಯಕ್ರಮ ನಡೆಯಿತು.

# ‘ಜೀವನ ಶೈಲಿ ಬದಲಾವಣೆಯಿಂದ ದೊಡ್ಡ ಕರುಳಿನ ಕ್ಯಾನ್ಸರ್ ಹೆಚ್ಚಳ’

ಉಡುಪಿ: ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜು, ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗ, ಮಣಿಪಾಲ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ ಸಹಭಾಗಿತ್ವದಲ್ಲಿ ದೊಡ್ಡ ಕರುಳಿನ ಕ್ಯಾನ್ಸರ್ ಕುರಿತು ವೈದ್ಯಕೀಯ ಶಿಕ್ಷಣ ಕಾರ್ಯಕ್ರಮ ನಡೆಯಿತು.

ಮಾಹೆ ಸಹ ಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್ ಮಾತನಾಡಿ, ಗುಣಮಟ್ಟದಲ್ಲಿ ರಾಜಿಯಾಗದೆ ಅತ್ಯುತ್ತಮ ವೈದ್ಯಕೀಯ ಸೇವೆಗಳನ್ನು ನೀಡುವಲ್ಲಿ ಕಸ್ತೂರಬಾ ಆಸ್ಪತ್ರೆ ಬದ್ಧವಾಗಿದೆ. ಮುಂದುವರಿದ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮ, ಶಸ್ತ್ರಚಿಕಿತ್ಸಾ ತಂತ್ರಜ್ಞಾನದಲ್ಲಿ ಕಸ್ತೂರಬಾ ಆಸ್ಪತ್ರೆ ಮುಂಚೂಣಿಯಲ್ಲಿದೆ ಎಂದರು.

ಮಾಹೆ ಸಹ ಉಪಕುಲಪತಿ ಡಾ.ಪಿ. ಎಲ್.ಎನ್.ಜಿ. ರಾವ್ ಮಾತನಾಡಿ, ಜೀವನಶೈಲಿಯ ಬದಲಾವಣೆಯಿಂದ ದೊಡ್ಡ ಕರುಳಿನ ಕ್ಯಾನ್ಸರ್ ದಕ್ಷಿಣ ಏಷ್ಯಾದಲ್ಲಿ ಸಾಮಾನ್ಯ ಎಂಬಂತಾಗಿದೆ. ಎಲ್ಲ ವಯಸ್ಸಿನ ಜನರಲ್ಲಿಯೂ ರೋಗ ಕಾಣಬಹುದು. 2020ರಲ್ಲಿ ಬಿಡುಗಡೆಯಾದ ವಿಶ್ವ ಆರೋಗ್ಯ ಸಂಸ್ಥೆಯ ಮಾಹಿತಿಯ ಪ್ರಕಾರ ಕ್ಯಾನ್ಸರ್ ರೋಗದಿಂದ ಮೃತಪಡುವವರ ಪೈಕಿ ದೊಡ್ಡ ಕರುಳಿನ ಕ್ಯಾನ್ಸರ್‌ಗೆ ಬಲಿಯಾಗುತ್ತಿರುವವರ ಪ್ರಮಾಣ ಹೆಚ್ಚಿದ್ದು, ಎರಡನೇ ಸ್ಥಾನದಲ್ಲಿದೆ ಎಂದರು.

ದೊಡ್ಡ ಕರುಳಿನ ಕ್ಯಾನ್ಸರ್ ಆರೈಕೆಯಲ್ಲಿನ ಇತ್ತೀಚಿನ ಚಿಕಿತ್ಸಾ ವಿಧಾನಗಳ ಬಗ್ಗೆ ಕಾರ್ಯಕ್ರಮದಲ್ಲಿ ಚರ್ಚಿಸಲಾಯಿತು. ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕೀಮೋಥೆರಪಿ, ರೇಡಿಯೊಥೆರಪಿ ಮತ್ತು ಪ್ರಶಾಮಕ ಮತ್ತು ಸಹಾಯಕ ಆರೈಕೆ ವಿಭಾಗ ಹಾಗೂ 6 ಕ್ಯಾನ್ಸರ್ ಕೇಂದ್ರಗಳ 28 ವೈದ್ಯರು ಭಾಗವಹಿಸಿದರು.

ಮುಂಬೈನ ಟಾಟಾ ಸ್ಮಾರಕ ಆಸ್ಪತ್ರೆಯ ಕರುಳು ಕ್ಯಾನ್ಸರ್ ಮತ್ತು ರೊಬೋಟಿಕ್ ಸರ್ಜನ್ ಡಾ. ಅವನಿಶ್ ಸಕ್ಲಾನಿ, ಉಡುಪಿ, ಮಂಗಳೂರು, ಶಿವಮೊಗ್ಗ, ದಾವಣಗೆರೆ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳಿಂದ 150ಕ್ಕೂ ಹೆಚ್ಚು ವೈದ್ಯರು ಭಾಗವಹಿಸಿದ್ದರು.

ಎರಡು ವರ್ಷಗಳಲ್ಲಿ ಕಸ್ತೂರಬಾ ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ 200 ಕರುಳಿನ ಕ್ಯಾನ್ಸರ್ ಸಂಬಂಧಿತ ಶಸ್ತ್ರಚಿಕಿತ್ಸೆಗಳು ನಡೆದಿವೆ ಎಂದು ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ನವೀನ್ ಕುಮಾರ್ ತಿಳಿಸಿದರು.

ಕೆಎಂಸಿ ಡೀನ್ ಡಾ. ಶರತ್ ಕುಮಾರ್ ರಾವ್ ಸ್ವಾಗತಿಸಿದರು. ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ ವಂದಿಸಿದರು. ಮಣಿಪಾಲ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ ಸಂಯೋಜಕ ಡಾ.ನವೀನ್ ಎಸ್. ಸಲಿನ್ಸ್ ಇದ್ದರು.

21-3-2021
UDAYAVANI - MANIPAL

# ದೊಡ್ಡ ಕರುಳಿನ ಕ್ಯಾನ್ಸರ್: ಸಿಎಂಇ




**ಉಡುಪಿ, ಮಾ. 20:** ಮಣಿಪಾಲದ ಕೆಎಂಸಿ ಮತ್ತು ಕಸ್ತೂರ್ಬಾ ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗವು ಮಣಿಪಾಲ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರದ ಸಹಭಾಗಿತ್ವದಲ್ಲಿ ಆಯೋಜಿಸಿದ ದೊಡ್ಡ ಕರುಳಿನ ಕ್ಯಾನ್ಸರ್ ಕುರಿತು ನಿರಂತರ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮವನ್ನು ಮಾಹೆ ಸಹಕುಲಾಧಿಪತಿ ಡಾ।ಎಚ್. ಎಸ್. ಬಲ್ಲಾಳ್ ಉದ್ಘಾಟಿಸಿದರು.

ದೊಡ್ಡ ಕರುಳಿನ ಕ್ಯಾನ್ಸರ್‌ನಿಂದ ಬದುಕುಳಿದವರ ಪುನಶ್ಚೇತನ ಸೌಕರ್ಯಗಳ ಕಾರ್ಯಕ್ರಮವನ್ನು ಉದ್ಘಾಟಿಸಿ, ಗುಣಮಟ್ಟದ ಬಗ್ಗೆ ಯಾವುದೇ ರಾಜಿ ಮಾಡಿಕೊಳ್ಳದೆ ಅತ್ಯುತ್ತಮ ಸೇವೆಗಳನ್ನು ಒದಗಿಸಲು ಆಸ್ಪತ್ರೆ ಬದ್ಧವಾಗಿದೆ ಎಂದು ಹೇಳಿದರು.

ಮುಖ್ಯ ಟಿಪ್ಪಣಿಯನ್ನು ಮುಂಬೈನ ಟಾಟಾ ಸ್ಮಾರಕ ಆಸ್ಪತ್ರೆಯ, ಕರುಳಿನ ಕ್ಯಾನ್ಸರ್ ಮತ್ತು ರೊಬೊಟಿಕ್ ಸರ್ಜನ್ ಡಾ। ಅವನಿಶ್ ಸಕ್ಲಾನಿ ನೀಡಿದರು. ಉಡುಪಿ, ದ.ಕ., ಶಿವಮೊಗ್ಗ, ದಾವಣಗೆರೆ, ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳಿಂದ 150ಕ್ಕೂ ಹೆಚ್ಚು ವೈದ್ಯರು ಭಾಗವಹಿಸಿದ್ದರು.

ಕಳೆದ ಎರಡು ವರ್ಷಗಳಲ್ಲಿ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗದಿಂದ ಸುಮಾರು 200 ಕರುಳಿನ ಕ್ಯಾನ್ಸರ್ ಸಂಬಂಧಿತ ಶಸ್ತ್ರಚಿಕಿತ್ಸೆಗಳು ನಡೆದಿವೆ ಎಂದು ಕ್ಯಾನ್ಸರ್ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ।ನವೀನ್ ಕುಮಾರ್ ಅವಲೋಕನದಲ್ಲಿ ತಿಳಿಸಿದರು.

ಕೆಎಂಸಿ ಡೀನ್ ಡಾ। ಶರತ್ ಕುಮಾರ್ ರಾವ್ ಸ್ವಾಗತಿಸಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ। ಅವಿನಾಶ್ ಶೆಟ್ಟಿ ವಂದಿಸಿದರು.

ಮಣಿಪಾಲ ಸಮಗ್ರ ಕ್ಯಾನ್ಸರ್ ಆರೈಕೆ ಕೇಂದ್ರ ಸಂಯೋಜಕ ಡಾ। ನವೀನ್ ಎಸ್. ಸಲಿನ್ಸ್ ಮತ್ತಿತರರು ಉಪಸ್ಥಿತರಿದ್ದರು.